ಭಾರತ ಸೇವಾದಳದ ವತಿಯಿಂದ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಪ್ರಾಥ ಶಾಲೆಗಳಲ್ಲಿ ನೇಮಕ ಮಾಡುವ ಬಗ್ಗೆ.

೧೭೦೪. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಭಾರತ ಸೇವಾದಳದ ವತಿಯಿಂದ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಪ್ರಾಥ ಶಾಲೆಗಳಲ್ಲಿ ನೇಮಕ ಮಾಡುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಆ) ಅವರನ್ನು ಸಿ. ಪಿ. ಎಡ್. ಗೆ ಸಮ ಎಂದು ಪರಿಗಣಿಸಿ ಕೆಲಸಕ್ಕೆ ಏಕೆ ನೇಮಿಸಿಕೊಳ್ಳಬಾರದು ?

ಇ) ಈ ವಿಚಾರದಲ್ಲಿ ಸರ್ಕಾರದವರ ನಿಲುವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಮತ್ತು ಇ) ಸಿ. ಪಿ. ಎಡ್. ತರಬೇತಿಗೂ, ಸೇವಾದಳದ ತರಬೇತಿಗೂ ಬಹಳ ಅಂತರವಿದೆ. ಸಿ. ಪಿ. ಎಡ್. ಕಾರ್ಯಕ್ರಮವು ಬಹಳ ವಿಶಾಲವಾಗಿದ್ದು, ಸೇವಾದಳದ ಕಾರ್ಯಕ್ರಮಕ್ಕಿಂತ ಉತ್ತಮ ಮಟ್ಟದ್ದಾಗಿರುತ್ತದೆ. ಸೇವಾದಳದಲ್ಲಿ ರಾಷ್ಟ್ರೀಯ ಭಾವನೆ ಮತ್ತು ಶ್ರಮದಾನ ಶಿಬಿರಗಳನ್ನು ಬಿಟ್ಟರೆ ಬೇರೆ ಯಾವ ವಿಷಯಗಳು ಇರುವುದಿಲ್ಲ. ಈ ಮೇಲೆ ಹೇಳಿರುವ ಸೇವಾದಳದ ಅಂಶಗಳು ಕೂಡ ಸಿ. ಪಿ ಎಡ್. ಗಳಲ್ಲಿ ಚಾಲನೆಯಲ್ಲಿದೆ ಸಿ. ಪಿ. ಎಡ್. ತರಬೇತಿ ಕೇವಲ ಶಾಲಾ ಕಾಲೇಜುಗಳಲ್ಲಿ ಒಂದು ನಿರ್ದಿಷ್ಟ ಗುರಿಯ ಮೂಲಕ ವಿದ್ಯಾರ್ಥಿಗಳಲ್ಲಿ ಶಾರೀರಿಕ ಶಿಕ್ಷಣದಲ್ಲಿ ತರಬೇತಿ ಕೊಡಲು ಇಲಾಖೆ ನಡೆಸುತ್ತಿದೆ. ಆದರೆ ಸೇವಾದಳ ಒಂದು ಸ್ವಯಂ ಸಂಸ್ಥೆಯಾಗಿದ್ದು ಸೀಮಿತ ಗುರಿಯನ್ನು ಹೊಂದಿರುತ್ತದೆ.

ಇ) ಸೇವಾದಳದ ವತಿಯಿಂದ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಸಿ. ಪಿ. ಎಡ್. ಗೆ ಸಮಾನವಾಗಿ ಪರಿಗಣಿಸಲಾಗುವುದಿಲ್ಲ.

ಕನ್ನಡದಲ್ಲಿ ರಾಜ್ಯಪತ್ರವನ್ನು ಪ್ರಕಟಿಸುವ ಬಗ್ಗೆ.

೫೦೪. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥನಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಕನ್ನಡದಲ್ಲಿ ರಾಜ್ಯ ಪತ್ರವನ್ನು ಪ್ರಕಟಿಸಲಾಗುತ್ತಿದೆಯೆ ?

ಆ) ಹಾಗಿದ್ದಲ್ಲಿ ಯಾವ ವಿಭಾಗಗಳನ್ನು ಕನ್ನಡದಲ್ಲಿ ಪ್ರಕಟಿಸಲಾಗುತ್ತಿದೆ ?

ಇ) ಈ ಪ್ರಕಟಣೆಗಳು ತುಂಬಾ ತಡವಾಗಿ ಪ್ರಕಟವಾಗುತ್ತಿರುವುದು ೧೯೬೫ ಅಕ್ಟೋಬರ್ ತಿಂಗಳ ಸಂಚಿಕೆ ಜನವರಿ ೧೯೬೬ರಲ್ಲಿ ಪ್ರಕಟವಾಗಿರುವುದು ನಿಜವೇ ?

ಈ) ಇತ್ತೀಚಿನ ಕನ್ನಡ ರಾಜ್ಯಪತ್ರವನ್ನು ಎಂದು ಪ್ರಕಟಿಸಲಾಗಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಅವಶ್ಯವಿರುವ ಎಲ್ಲಾ ವಿಭಾಗಗಳನ್ನು (೧ ರಿಂದ ೯) ಪ್ರಕಟಿಸಲಾಗುತ್ತದೆ.

ಇ) ಅಕ್ಟೋಬರ್ ತಿಂಗಳಲ್ಲಿ ನಾಲ್ಕು ಸಂಚಿಕೆಗಳಿದ್ದು ಅವುಗಳು ಈ ಕೆಳಗೆ ನಮೂದಿಸಿರುವಂತೆ ಪ್ರಕಟವಾಗಿವೆ.

೫–೧೦–೧೯೬೫ರ ಸಂಚಿಕೆ ೬–೧೨–೧೯೬೫ರಲ್ಲಿ
೧೦–೧೦–೧೯೬೫ರ ಸಂಚಿಕೆ ೧೯–೧೨–೧೯೬೫ರಲ್ಲಿ
೨೪–೧೦–೧೯೬೫ರ ಸಂಚಿಕೆ ೧೯–೧೨–೧೯೬೫ರಲ್ಲಿ
೩೦–೧೦–೧೯೬೫ರ ಸಂಚಿಕೆ ೩೦–೧೨–೧೯೬೫ರಲ್ಲಿ